**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**

**ಸಿ ಸಿ ನಂ : 571/2016**

**ಪಿ ಡಬ್ಲ್ಯೂ - 2**

**ಸಿ ಡಬ್ಲ್ಯೂ - 3**

**ದಿಃ 27.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ರಾಜಮ್ಮ**
**ಗಂಡನ ಹೆಸರು ಃ ನಾಗರಾಜಯ್ಯ**
**ವಯಸ್ಸು ಃ 52 ವರ್ಷ**
**ಉದ್ಯೋಗ ಃ ಗೃಹಿಣಿ**
**ವಿಳಾಸ ಃ ಬಸವೇನಹಳ್ಳಿ ಗ್ರಾಮ, ನೆಲಮಂಗಲ ತಾಲ್ಲೂಕು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದಃ**

ಚಾಸಾ-1 ನನ್ನ ಮಗಳು. ಚಾಸಾ-2 ನನ್ನ ಗಂಡ ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಚಾಸಾ-4 ರಿಂದ 7 ಗೊತ್ತು. ಚಾಸಾ-4 ರವರು ಈಗ್ಗೆ 2 ವರ್ಷಗ ಹಿಂದೆ ಮರಣ ಹೊಂದಿರುತ್ತಾರೆ. 1 ನೇ ಆರೋಪಿ ನನ್ನ ಅಳಿಯ, 2 ಮತ್ತು 3 ನೇ ಆರೋಪಿ 1 ನೇ ಆರೋಪಿಯ ತಂದೆ ತಾಯಿಗಳು. ಸುಮಾರು 10-12 ವರ್ಷಗಳ ಹಿಂದೆ 1 ನೇ ಆರೋಪಿ ಮತ್ತು ಚಾಸಾ-1 ರವರ ಮದುವೆ ಆಗಿತ್ತು. ಮದುವೆಯ ಸಂದರ್ಭದಲ್ಲಿ ಉಂಗುರ ಮತ್ತು ಕೊರಳು ಚೈನ್‌ನ್ನು ನೀಡಿರುತ್ತೇವೆ. ಹಣವನ್ನು ಕೊಟ್ಟಿರಲಿಲ್ಲ. ಮದುವೆಯಾಗಿ 1 ತಿಂಗಳವರೆಗೂ ಚಾಸಾ-1 ರವರು ನೆಮ್ಮದಿಯಾಗಿರಲಿಲ್ಲ. ಆರೋಪಿತರು ಚಾಸಾ-1 ರವರನ್ನು ಹೊಡೆದು ಮನೆಯಿಂದ ಹೊರಗೆ ಹಾಕಿದ್ದರು. ಆರೋಪಿತರು ಚಾಸಾ-1 ರವರ ಮೇಲೆ ವಿನಾ ಕಾರಣ ಅನುಮಾನಪಟ್ಟು ಸುಮಾರು ರೂ. 10 ಲಕ್ಷ ವರದಕ್ಷಿಣೆ ತರಬೇಕೆಂದು ಹಿಂಸೆ ಕೊಟ್ಟು ಮನೆಯಿಂದ ಹೊರಹಾಕಿದ್ದರು. ಆದ್ದರಿಂದ ಚಾಸಾ-1 ರವರು ಪೋಲೀಸ್ ಠಾಣೆಗೆ ದೂರನ್ನು ಕೊಟ್ಟಿದ್ದಳು. ಆರೋಪಿತರೊಂದಿಗೆ ಸಾಕಷ್ಟು ಪಂಚಾಯಿತಿಯನ್ನು ಮಾಡಿದ್ದೆವು. ಚಾಸಾ-4 ರಿಂದ 7 ರವರು ಪಂಚಾಯಿತಿಯನ್ನು ಮಾಡಿದ್ದರು. ಸದರಿ ವಿಚಾರವಾಗಿ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ ಎ.ಕೆ. ವಕೀಲರಿಂದ**

ನಮ್ಮ ಮಗಳು ಚಾಸಾ-1 ರವರ ಮದುವೆಯನ್ನು ನೆಲಮಂಗಲದ ಕವಾಡಿ ಮಠದಲ್ಲಿ ಮಾಡಿಕೊಡಲಾಗಿತ್ತು. ಕವಾಡಿ ಮಠವು ಹಿಂದುಳಿದ ವರ್ಗ ಹಾಗೂ ಬಡವರಿಗೆ ಮದುವೆ ಮಾಡಿಕೊಡಲು ಇರುವ ಮಂಟಪ ಎಂದರೆ ಸರಿ. ಮದುವೆಯ ಮಾತುಕತೆ ನಮ್ಮ ಮನೆಯಲ್ಲಿ ಆಗಿತ್ತು. ಮದುವೆಯ ಮಾತುಕತೆಯ ಸಂದರ್ಭದಲ್ಲಿ ಎರಡೂ ಕುಟುಂಬದವರು ಇದ್ದೆವು. ಚಾಸಾ-2 ಡ್ರೈವರ್ ಆಗಿದ್ದರು. ಮದುವೆಯಾದ ನಂತರ ಚಾಸಾ-1 ರವರು ನಮ್ಮ ಮನೆಯಲ್ಲಿ ಒಂದು ವಾರದಿಂದ 15 ದಿನ ಇದ್ದರು. ಚಾಸಾ-1 ರವರು ಗಂಡನ ಮನೆಯಲ್ಲಿ 15 ದಿನವೂ ಇರಲಿಲ್ಲ. ಚಾಸಾ-1 ಮತ್ತು 1 ನೇ ಆರೋಪಿ ಬೇರೆ ಮನೆ ಮಾಡಿಕೊಂಡಿರಲಿಲ್ಲ. ಮದುವೆಯ ಸಮಯದಲ್ಲಿ ಆರೋಪಿತರು ಯಾವುದೇ ಬೇಡಿಕೆಯನ್ನು ಇಟ್ಟಿರಲಿಲ್ಲ. ಮದುವೆಯ ಸಮಯದಲ್ಲಿ ವರದಕ್ಷಿಣೆ ಕೊಟ್ಟಿರಲಿಲ್ಲ ಒಡವೆಯನ್ನು ಕೊಟ್ಟಿದ್ದೆವು. ಆರೋಪಿತರು ಮದುವೆಯ ಖರ್ಚನ್ನು ಹಾಗೂ ಚಾಸಾ-1 ರವರಿಗೆ ಒಡವೆಯನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಚಾಸಾ-1 ರವರನ್ನು ಒಂದು ಎರಡು ದಿನಗಳ ನಂತರ ಗಂಡನ ಮನೆಗೆ ಕರೆದುಕೊಂಡು ಹೋಗಿದ್ದರು. ನಂತರ ಚಾಸಾ-1 ರವರು 15 – 20 ದಿನಗಳ ಕಾಲ ಗಂಡನ ಮನೆಯಲ್ಲಿ ಇದ್ದರು. ಚಾಸಾ-1 ರವರ ಗಂಡನ ಮನೆಯಲ್ಲಿ 1 ನೇ ಆರೋಪಿಯ ಅಪ್ಪ ಅಮ್ಮ ಹಾಗೂ ಅಕ್ಕ ಇದ್ದರು. 1 ನೇ ಆರೋಪಿ ಯಾವ ಕೆಲಸ ಮಾಡುತ್ತಿದ್ದ ಎಂದು ಗೊತ್ತಿಲ್ಲ. 2 ನೇ ಆರೋಪಿ ಯಾವ ಕೆಲಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ಆರೋಪಿತರು ಆರ್ಥಿಕವಾಗಿ ಸದೃಢರಾಗಿದ್ದರು ಎಂದರೆ ಸರಿಯಲ್ಲ. ಆರೋಪಿತರಿಗೆ ಸ್ವಂತ ಮನೆ ಇತ್ತು ಎಂದರೆ ಸರಿ. ಚಾಸಾ-1 ಹಾಗೂ 1 ನೇ ಆರೋಪಿ ಸರಿಯಾಗಿಯೇ ಇದ್ದರೂ ಸುಳ್ಳು ದೂರನ್ನು ಕೊಡಲಾಗಿದೆ ಎಂದರೆ ಸರಿಯಲ್ಲ. ಚಾಸಾ-1 ನಮ್ಮ ಮನೆಯಲ್ಲಿಯೇ ವಾಸವಾಗಿದ್ದಾರೆ. ಆರೋಪಿತರು ಚಾಸಾ-1 ರವರಿಗೆ ಯಾವುದೇ ರೀತಿಯ ವರದಕ್ಷಿಣೆ ಕೇಳಿಲಿಲ್ಲ ಚಾಸಾ-1 ರವರಿಗೆ ಸಹಾಯ ಮಾಡಲು ಹಾಗೂ ಪೋಲೀಸರ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**